# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 374
ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 13.08.2025
ಉತ್ತರಿಸುವ ಸಚಿವರು : ಕಂದಾಯ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸಂಘ ಸಂಸ್ಥೆಗಳಿಗೆ, ಸರ್ಕಾರಿ ಇಲಾಖೆಗಳಿಗೆ ಹಾಗೂ ವ್ಯಕ್ತಿಗತ ಫಲಾನುಭವಿಗಳಿಗೆ ಸರ್ಕಾರಿ ಭೂಮಿ ಮಂಜೂರು ಮಾಡಲು ಇರುವ ನಿಯಮ ಮತ್ತು ನಿಬಂಧನೆಗಳೇನು: ಮಂಜೂರು ಮಾಡುವ ಪ್ರಾಧಿಕಾರ ಯಾವುದು: | ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 20 ರನ್ವಯ ಗೃಹ ನಿರ್ಮಾಣ ಮಂಡಳಿ, (ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ), ಸಹಕಾರ ಸಂಘಗಳು ಮತ್ತು ಇತರ ಶಾಸನಬದ್ಧ ಮಂಡಳಿಗೆ ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದು ಜಿಲ್ಲಾಧಿಕಾರಿಯವರು ಜಮೀನನ್ನು ಮಂಜೂರು ಮಾಡಲು ಅವಕಾಶವಿರುತ್ತದೆ. ಪರಂತು, ಜಮೀನಿನ ವಿಸ್ತೀರ್ಣವು ನಾಲ್ಕು ಹೆಕ್ಟೇರುಗಳಿಗಿಂತ ಮೀರದಿದ್ದರೆ, ಅಂತಹ ಪೂರ್ವಾನುಮೋದನೆ ಅವಶ್ಯಕವಿರುವುದಿಲ್ಲ.<br><br>ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 19, 20, 21 ಮತ್ತು 22ರಲ್ಲಿ ಉಲ್ಲೇಖಿಸಿರುವ ಕೈಗಾರಿಕೆ, ಶಿಕ್ಷಣ, ಕಲ್ಯಾಣ ಚಟುವಟಿಗಳು, ಧಾರ್ಮಿಕ ಹಾಗೂ ಬೇಸಾಯೇತರ ಹಾಗೂ ಇತರೆ ಉದ್ದೇಶಗಳಿಗೆ ಸರ್ಕಾರದ ಹಂತದಲ್ಲಿ ಜಮೀನು ಮಂಜೂರು ಮಾಡಲಾಗುತ್ತದೆ.<br><br>ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 22-ಎ(3)(i)ರನ್ವಯ ಸರ್ಕಾರಿ ಇಲಾಖೆಗಳಿಗೆ ಉಚಿತವಾಗಿ ಮಂಜೂರು ಮಾಡಲು ಅವಕಾಶವಿದೆ. |
| ಆ) | ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂಮಿ ಮಂಜೂರು ಮಾಡಲು ಯುಕ್ತವಾದ ಲಭ್ಯ ಜಮೀನೆಷ್ಟು: (ತಾಲ್ಲೂಕುವಾರು, ಗ್ರಾಮವಾರು, ಸರ್ವೆ ನಂಬರ್‌ವಾರು ಹಾಗೂ ವಿಸ್ತೀರ್ಣವಾರು ಮಾಹಿತಿ ನೀಡುವುದು) | **ಉಡುಪಿ ಜಿಲ್ಲೆ:**<br><br>ದಿನಾಂಕ: 01-07-2025 ರಂದು ಪ್ರಕಟಿಸಲಾದ ಭೂ ಲಭ್ಯತಾ ಪಟ್ಟಿಯಂತೆ ಲಭ್ಯವಿರುವ ಜಮೀನಿನ ತಾಲ್ಲೂಕುವಾರು ವಿವರವನ್ನು ಈ ಕೆಳಕಂಡಂತೆ ನೀಡಲಾಗಿದೆ. |

| ಕ್ರ.ಸಂ. | ತಾಲೂಕು | ವಿಸ್ತೀರ್ಣ (ಎಕ್ರೆಗಳಲ್ಲಿ) |
|---|---|---|
| 1 | ಬೈಂದೂರು | 0.15 |
| 2 | ಬ್ರಹ್ಮಾವರ | 54.32 |
| 3 | ಉಡುಪಿ | 10.26 |
| 4 | ಕಾಪು | 42.8925 |
| 5 | ಕುಂದಾಪುರ | 61.9175 |
| 6 | ಕಾರ್ಕಳ | 28.55 |
| 7 | ಹೆಬ್ರಿ | 46.04 |
| | ಒಟ್ಟು | 244.13 |

**ದಕ್ಷಿಣ ಕನ್ನಡ ಜಿಲ್ಲೆ:**

ಜಿಲ್ಲೆಯಲ್ಲಿ ಕುಮ್ಕಿ, ಡೀಮ್ಡ್ ಫಾರೆಸ್ಟ್, ಸಾರ್ವಜನಿಕ ಉದ್ದೇಶಕ್ಕೆ ಕಾಯ್ದಿರಿಸಲಾದ, 94ಸಿ, ಕಾಯ್ದಿಟ್ಟ ಅರಣ್ಯ, ಬಗರ ಹುಕುಂ ಸಾಗುವಳಿಯಲ್ಲಿನ ಜಮೀನು ಹೊರತಾದ ಸರ್ಕಾರಿ ಜಮೀನು ಲಭ್ಯವಿರುವುದಿಲ್ಲ.

ಇ) ಸದರಿ ಜಿಲ್ಲೆಯಲ್ಲಿ ಈವರೆಗೆ ಸರ್ಕಾರಿ ಭೂಮಿ ಮಂಜೂರಾತಿಗಾಗಿ ಸಲ್ಲಿಕೆಯಾದ ಸಂಘ ಸಂಸ್ಥೆಗಳ, ಸರ್ಕಾರಿ ಇಲಾಖೆಗಳ ಹಾಗೂ ವ್ಯಕ್ತಿಗತ ಫಲಾನುಭವಿಗಳ ಅರ್ಜಿಗಳೆಷ್ಟು; ಇವುಗಳಲ್ಲಿ ಪುರಸ್ಕರಿಸಿ ಮಂಜೂರು ಮಾಡಿದ, ತಿರಸ್ಕರಿಸಿದ ಮತ್ತು ಬಾಕಿಯಿರುವ ಅರ್ಜಿಗಳೆಷ್ಟು; ಬಾಕಿಯಿರಲು ಕಾರಣವೇನು?

**ಉಡುಪಿ ಜಿಲ್ಲೆ:**

ಭೂ ಮಂಜೂರಾತಿ ಕೋರಿ ಸಲ್ಲಿಕೆಯಾದ ಅರ್ಜಿಗಳ ವಿವರ ಈ ಕೆಳಕಂಡಂತಿದೆ.

**ಸಂಘ ಸಂಸ್ಥೆಗಳು**

| ತಾಲೂಕು | ಸ್ವೀಕೃತಿ | ಮಂಜೂರು | ತಿರಸ್ಕೃತ | ಬಾಕಿ |
|---|---|---|---|---|
| ಬೈಂದೂರು | 7 | 3 | 1 | 3 |
| ಬ್ರಹ್ಮಾವರ | 5 | 0 | 2 | 3 |
| ಉಡುಪಿ | 11 | 0 | 6 | 5 |
| ಕಾಪು | 6 | 1 | 3 | 2 |
| ಕುಂದಾಪುರ | 6 | 0 | 0 | 6 |
| ಕಾರ್ಕಳ | 4 | 1 | 0 | 3 |
| ಹೆಬ್ರಿ | 5 | 0 | 0 | 5 |
| ಒಟ್ಟು | 44 | 5 | 12 | 27 |

**ಸರ್ಕಾರಿ ಇಲಾಖೆಗಳು**

| ತಾಲೂಕು | ಸ್ವೀಕೃತಿ | ಮಂಜೂರು | ತಿರಸ್ಕೃತ | ಬಾಕಿ |
|---|---|---|---|---|
| ಬೈಂದೂರು | 127 | 123 | 0 | 4 |
| ಬ್ರಹ್ಮಾವರ | 54 | 23 | 3 | 25 |
| ಉಡುಪಿ | 77 | 46 | 4 | 27 |
| ಕಾಪು | 74 | 34 | 14 | 20 |
| ಕುಂದಾಪುರ | 32 | 6 | 0 | 26 |
| ಕಾರ್ಕಳ | 97 | 81 | 5 | 11 |
| ಹೆಬ್ರಿ | 32 | 27 | 0 | 5 |
| ಒಟ್ಟು | 493 | 340 | 26 | 118 |

**ವ್ಯಕ್ತಿಗತ ಫಲಾನುಭವಿಗಳು**

| ತಾಲೂಕು | ಸ್ವೀಕೃತಿ | ಮಂಜೂರು | ತಿರಸ್ಕೃತ | ಬಾಕಿ |
|---|---|---|---|---|
| ಬೈಂದೂರು | 12 | 11 | 00 | 01 |
| ಬ್ರಹ್ಮಾವರ | 47 | 0 | 38 | 9 |
| ಉಡುಪಿ | 58 | 4 | 42 | 12 |
| ಕಾಪು | 12 | 3 | 9 | 0 |
| ಕುಂದಾಪುರ | 8 | 3 | 0 | 5 |
| ಕಾರ್ಕಳ | 36 | 14 | 0 | 22 |
| ಹೆಬ್ರಿ | 58 | 0 | 0 | 58 |
| ಒಟ್ಟು | 231 | 35 | 89 | 107 |

ಬಾಕಿ ಪ್ರಕರಣಗಳು ಸೂಕ್ತ ಜಮೀನು ಗುರುತಿಸುವಿಕೆ, ಮೋಜಣಿ, ಇತ್ಯಾದಿ ವಿವಿಧ ತನಿಖಾ ಹಂತದಲ್ಲಿ ಬಾಕಿ ಇರುತ್ತದೆ

**ದಕ್ಷಿಣ ಕನ್ನಡ ಜಿಲ್ಲೆ:**

| ವಿಷಯ | ಒಟ್ಟು ಅರ್ಜಿಗಳು | ಮಂಜೂರಾತಿ | ತಿರಸ್ಕೃತ | ಬಾಕಿ |
|---|---|---|---|---|
| ವ್ಯಕ್ತಿಗತ ಫಲಾಭವಿಗಳು | 50 - 1,13,730 | 46,605 | 67,119 | 06 |
| | 53 - 1,11,420 | 32,336 | 75,530 | 3,554 |

| | | | | |
|---|---|---|---|---|
| 57 – | 1,25,399 | 5,284 | 16,026 | 1,04,089 |
| 94C- | 1,27,020 | 59,636 | 63,573 | 3,811 |
| 94CC- | 47,143 | 28,722 | 17,766 | 655 |
| ಸರ್ಕಾರಿ ಇಲಾಖೆಗಳು | 252 | 77 | 91 | 84 |
| ಸಂಘ ಸಂಸ್ಥೆಗಳು | 275 | 110 | 104 | 61 |

ಬಾಕಿಯಿರಲು ಕಾರಣಗಳು:

- ನಮೂನೆ 50: ನ್ಯಾಯಾಲಯದಿಂದ ರಿಮಾಂಡ್ ಆಗಿರುವ ಪ್ರಕರಣಗಳಾಗಿದ್ದು, ತನಿಖಾ ಹಂತದಲ್ಲಿರುತ್ತವೆ.
- ನಮೂನೆ 53: ಕುಮ್ಕಿ ಜಮೀನಾಗಿರುತ್ತವೆ.
- ನಮೂನೆ 57: ದಿನಾಂಕ: 30.05.2023 ರಂದು ಅರ್ಜಿ ಸ್ವೀಕೃತಿ ಮುಕ್ತಾಯಗೊಂಡಿದ್ದು, ಬಾಕಿ ಇರುವ ಅರ್ಜಿಗಳು ತನಿಖಾ ಹಂತದಲ್ಲಿದ್ದಿ, ಶೀಘ್ರಗತಿಯಲ್ಲಿ ವಿಲೇವಾರಿಗೆ ಕ್ರಮವಹಿಸಲಾಗುತ್ತಿದೆ.
- 94ಸಿ & 94ಸಿಸಿ: ಅರಣ್ಯ ಇಲಾಖಾ ಅಭಿಪ್ರಾಯ ಮತ್ತು ತನಿಖಾ ಹಂತದಲ್ಲಿ ಇರುತ್ತವೆ.

ಸರ್ಕಾರಿ / ಸಂಘ ಸಂಸ್ಥೆಗಳು: ತನಿಖಾ ಹಂತದಲ್ಲಿದ್ದು, ಜಮೀನು ಲಭ್ಯತೆ ಆಧರಿಸಿ ನಿಯಮಾನುಸಾರ ವಿಲೇಪಡಿಸಲು ಕ್ರಮವಹಿಸಲಾಗುತ್ತಿದ.

| | | |
|---|---|---|
| ಈ) | ಪರಿಷ್ಕರಿಸಿದ ನಿಯಮಗಳನ್ವಯ ಅಕ್ರಮ ಸಕ್ರಮ ಯೋಜನೆಯಡಿ ತಿರಸ್ಕರಿಸಿದ ಪ್ರಕರಣಗಳಲ್ಲಿ ಆಕ್ರಮಿತ ಭೂಮಿಯನ್ನು ಕಂದಾಯ ಇಲಾಖೆ ತನ್ನ ಸುಪರ್ಧಿಗೆ ತೆಗೆದುಕೊಂಡಿದೆಯೇ: ಸುಪರ್ಧಿಗೆ ತೆಗೆದುಕೊಳ್ಳದಿರಲು ಕಾರಣವೇನು: | ಅಕ್ರಮ ಸಕ್ರಮ ಯೋಜನೆಯಡಿ ತಿರಸ್ಕರಿಸಿದ ಪ್ರಕರಣಗಳಲ್ಲಿ ಯಾವುದೇ ನ್ಯಾಯಾಲಯದಲ್ಲಿ ತಡೆಯಾಜ್ಞೆ ನೀಡದ ಪ್ರಕರಣಗಳಲ್ಲಿ ಹಾಗೂ ಕುಮ್ಕಿ ವಿಶೇಷ ಸೌಲಭ್ಯ ಹೊಂದಿರದ ಜಮೀನುಗಳನ್ನು ಕಂದಾಯ ಇಲಾಖೆಯ ಸುಪರ್ದಿಗೆ ತೆಗೆದುಕೊಳ್ಳಲು ಕ್ರಮವಹಿಸಲಾಗುತ್ತಿದೆ. |
| ಉ) | ಪ್ರತಿ ವಿಭಾಗಕ್ಕೆ ಸಂಬಂಧಿಸಿದ ಅರ್ಜಿಗಳನ್ನು ಎಷ್ಟು ದಿನದಲ್ಲಿ ವಿಲೇವಾರಿ ಮಾಡಲಾಗುವುದು: ವಿಲೇವಾರಿ ಮಾಡದೇ ತಮ್ಮ ಹಂತದಲ್ಲಿ ಬಾಕಿಯಿಟ್ಟುಕೊಂಡಿರುವ ಅಧಿಕಾರಿಗಳ ಮೇಲ ಕೈಗೊಂಡ ಕ್ರಮಗಳೇನು? | ಕರ್ನಾಟಕ ಭೂಕಂದಾಯ ಕಾಯ್ದೆ, 1964 ರ ಕಲಂ 71 ಮತ್ತು ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969 ರಡಿ ಜಮೀನಿನ ಲಭ್ಯತೆಗೆ ಅನುಸಾರವಾಗಿ ನಿಗದಿತ ಕಾಲಮಿತಿಯಲ್ಲಿ ಅರ್ಜಿಗಳನ್ನು ವಿಲೇವಾರಿ ಮಾಡಲು ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ: ಆರ್‌ಡಿ 104 ಎಲ್‌ಜಿಕ್ಯೂ 2025

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು